7

ಕರ್ನಾಟಕ ಸರ್ಕಾರ

ಸಂಖ್ಯೆ:ಎ.ಎಲ್.ಎನ್ (ಎನ್.ಎ.ವೈ)ಸಿಆರ್–12/06–07.

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ಜಿಲ್ಲೆ,
ಬೆಂಗಳೂರು. ದಿನಾಂಕ: 11–7–2006

ಅಧಿಕೃತ ಜ್ಞಾಪನ

ವಿಷಯ:– ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ ಮಂಡಲಕುಂಟೆ ಗ್ರಾಮದ ಸರ್ವೆ.ನಂಬರ್ 5 (ಹೊಸ ಸ.ನಂ. 5/2) ರಲ್ಲಿ 5–12 ಎ/ಗುಂ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ ಕೈಗಾರಿಕಾ/ಶೈಕ್ಷಣಿಕ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿರುವ ಆದೇಶವನ್ನು ಮಾರ್ಪಡಿಸಿ ಈ ಪೈಕಿ 3–20 ಎ/ಗುಂ ಜಮೀನನ್ನು ವಾಸದ ಉದ್ದೇಶಕ್ಕೆ ನವೀಕರಿಸಿ ಭೂ ಪರಿವರ್ತನೆ ಮಂಜೂರು ಮಾಡುವ ಬಗ್ಗೆ.

OFFICE OF THE DEPUTY COMMISSIONER Bangalore Dist, Bangalore.

ಉಲ್ಲೇಖ:– 1) ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಬಿ.ಡಿಸ್: ಎ.ಎಲ್.ಎನ್:ಎಸ್. ಆರ್(ಎನ್)141/81–82 ದಿನಾಂಕ: 20–5–1982.

2) ಕೈಗಾರಿಕಾ ಉದ್ದೇಶಕ್ಕಾಗಿ ಈಗಾಗಲೇ ಪಾವತಿಸಿರುವ ಭೂ ಪರಿವರ್ತನಾ ಶುಲ್ಕ ರೂ. 14,000/– ವ್ಯತ್ಯಾಸದ ಭೂ ಪರಿವರ್ತನೆ ಶುಲ್ಕ ರೂ. 1,76,630/–ಗಳನ್ನು ಚಲನ್ ಸಂಖ್ಯೆ 5 ದಿನಾಂಕ: 30–6–06 ರಂತೆ ಎಸ್.ಬಿ.ಎಂ. ಬ್ಯಾಂಕ್ ಬೆಂಗಳೂರು ಇಲ್ಲಿ ಜಮಾ ಮಾಡಿರುತ್ತಾರೆ.

3) ಶ್ರೀ. ಪೆರಿಕಲ್.ಎಂ. ಮಲ್ಲಪ್ಪ ಇವರು ಸಲ್ಲಿಸಿರುವ ಅರ್ಜಿ ದಿನಾಂಕ: 20–5–2006..

* * *

ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ. ಮಂಡಲಕುಂಟೆ ಗ್ರಾಮದ ಸ.ನಂ. 5 (ಹೊಸ ಸ.ನಂ. 5/2) ರಲ್ಲಿ 5–12 ಎ/ಗುಂ ವಿಸ್ತೀರ್ಣದ ಜಮೀನಿನ ಪೈಕಿ 4–00 ಎಕರೆ ಕೈಗಾರಿಕೆ ಉದ್ದೇಶಕ್ಕಾಗಿ ಹಾಗೂ 1–12 ಎಕರೆ ಶೈಕ್ಷಣಿಕ ಉದ್ದೇಶಕ್ಕಾಗಿ ಈ ಕಛೇರಿಯ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ: ಬಿ.ಡಿಸ್: ಎ.ಎಲ್.ಎನ್:ಎಸ್. ಆರ್(ಎನ್)141/81–82 ದಿನಾಂಕ: 20–5–1982 ರಂತೆ ಭೂ ಪರಿವರ್ತನೆ ಮಾಡಲಾಗಿತ್ತು.

ಉಲ್ಲೇಖ (3) ರಲ್ಲಿನ ಶ್ರೀ. ಪೆರಿಕಲ್.ಎಂ. ಮಲ್ಲಪ್ಪ ಇವರು ಮನವಿ ಸಲ್ಲಿಸಿ ಸದರಿ ಸ.ನಂ. 5 (ಹೊಸ ಸ.ನಂ. 5/2) ರಲ್ಲಿ 5–12 ಎ/ಗುಂ ವಿಸ್ತೀರ್ಣದ ಜಮೀನನ್ನು ಕೈಗಾರಿಕಾ/ಶೈಕ್ಷಣಿಕ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿದ್ದು, ಶೈಕ್ಷಣಿಕ ಹಾಗೂ ಕೈಗಾರಿಕಾ ಉದ್ದೇಶದಿಂದ ಬದಲಾಯಿಸಿ ಸಿ.ಡಿ.ಪಿ.ಯಂತೆ ವಾಸದ ಉದ್ದೇಶಕ್ಕೆ ಭೂ ಪರಿವರ್ತನೆ ಆದೇಶವನ್ನು ನವೀಕರಿಸಿಕೊಡಲು ಕೋರಿರುತ್ತಾರೆ. ಅರ್ಜಿದಾರರ ಮನವಿಯನ್ನು ಪರಿಗಣಿಸಿ ಮಂಡಲಕುಂಟೆ ಗ್ರಾಮದ ಸ.ನಂ. 5 ರಲ್ಲಿ (ಹೊಸ ನಂ. 5/2) 2–08 ಎಕರೆ ಕೈಗಾರಿಕೆ ಉದ್ದೇಶಕ್ಕಾಗಿ ಹಾಗೂ 1–12 ಎಕರೆ ಶೈಕ್ಷಣಿಕ ಉದ್ದೇಶಕ್ಕಾಗಿ ಒಟ್ಟು 3–20 ಎಕರೆ ಜಮೀನು ಭೂ

ಪರಿವರ್ತನೆಯಾಗಿರುವುದನ್ನು ವಾಸದ ಉದ್ದೇಶಕ್ಕೆ ವ್ಯತ್ಯಾಸದ ಭೂ ಪರಿವರ್ತನೆ ಶುಲ್ಕ ರೂ. 1,76,630/–ಗಳನ್ನು ಚಲನ್ ಸಂಖ್ಯೆ: 5 ರಂತೆ ದಿನಾಂಕ: 30–6–2006 ರಂದು ಸರ್ಕಾರಕ್ಕೆ ಜಮಾ ಮಾಡಿರುವ ಪ್ರಯುಕ್ತ ಕೈಗಾರಿಕಾ/ಶೈಕ್ಷಣಿಕ ಉದ್ದೇಶಕ್ಕೆ ಬದಲಾಗಿ ಸಿಡಿಪಿ ಯಂತೆ ಈ ಕೆಳಕಂಡ ಚಕ್ಕುಬಂದಿಯಂತೆ ವಾಸದ ಉದ್ದೇಶಕ್ಕೆ ಬಳಸಲು ನವೀಕರಿಸಿ ಮತ್ತೆ ಈ ದಿನಾಂಕದಿಂದ 2 ವರ್ಷಗಳ ಅವಧಿಗೆ ಅನುಮತಿ ನೀಡಿದೆ, ಈ ನವೀಕರಣ ಆದೇಶವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ನಕ್ಷೆಯನ್ನು ಮಂಜೂರಿ ಮಾಡಿಸಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ನೀಡಿದೆ, ಉಳಿದಂತೆ ದಿನಾಂಕ: 20–5–1982 ರಲ್ಲಿನ ಅಧಿಕೃತ ಜ್ಞಾಪನ ಪತ್ರದಲ್ಲಿ ನಮೂದಿಸಿರುವ ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಮಂಡಲಕುಂಟೆ ಗ್ರಾಮದ ಸ.ನಂ. 5 (ಹೊಸ ನಂ. 5/2) ರಲ್ಲಿ ಕೈಗಾರಿಕಾ (2–08 ಎಕರೆ) ಹಾಗೂ ಶೈಕ್ಷಣಿಕ (1–12 ಎಕರೆ) ಉದ್ದೇಶದಿಂದ ವಾಸದ ಉದ್ದೇಶಕ್ಕೆ ಒಟ್ಟು 3–20 ಎ/ಗುಂ ವಿಸ್ತೀರ್ಣದ ಭೂ ಪರಿವರ್ತಿತ ಜಮೀನಿಗೆ ಚಕ್ಕುಬಂದಿ:–

| | | |
|---|---|---|
| ಪೂರ್ವಕ್ಕೆ | :: | ಮಂಡಲಕುಂಟೆ ಗ್ರಾಮದ ಸ.ನಂ. 5/1 ಮತ್ತು ಸ.ನಂ. 5/3 ರ ಸ್ವತ್ತು |
| ಪಶ್ಚಿಮಕ್ಕೆ | :: | ಅರ್ಜಿದಾರರ ಸ.ನಂ. 5/2 ರ ಉಳಿಕೆ ಜಮೀನು |
| ಉತ್ತರಕ್ಕೆ | :: | ರಸ್ತೆ (ಯಲಹಂಕ–ಯಶವಂತಪುರ) |
| ದಕ್ಷಿಣಕ್ಕೆ | :: | ಮಂಡಲಕುಂಟೆ ಗ್ರಾಮದ ಸ.ನಂ. 6/6 ರ ಜಮೀನು |

OFFICE OF THE DEPUTY COMMISSIONER Bangalore Dist. Bangalore

ಸಹಿ/–
( ಡಾ: ರಾಮೇಗೌಡ )
ವಿಶೇಷ ಜಿಲ್ಲಾಧಿಕಾರಿ(ಕಂ)
ಬೆಂಗಳೂರು ಜಿಲ್ಲೆ.

<u>ಪ್ರತಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ:–</u>

1) ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
2) ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಉಪ ವಿಭಾಗ, ಬೆಂಗಳೂರು.
3) ಉಪ ನಿರ್ದೇಶಕರು, ಭೂಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಉಪ ವಿಭಾಗ, ಬೆಂಗಳೂರು.
4) ತಹಶೀಲ್ದಾರ್, ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಬೆಂಗಳೂರು ರವರಿಗೆ ಮೂಲ ಕಡತ ಹಾಗೂ ಚಲನ್ ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರ್ ಭೂ ಪರಿವರ್ತನೆಯಾಗಿದೆ ಎಂದು ಗಣಕೀಕೃತ ಆರ್.ಟಿ.ಸಿ.ಯಲ್ಲಿ ನಮೂದಿಸತಕ್ಕದ್ದು ಮತ್ತು ಈ ಜಮೀನಿಗೆ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.
5) ಅರ್ಜಿದಾರರಾದ ಶ್ರೀ. ಪೆರಿಕಲ್.ಎಂ. ಮಲ್ಲಪ್ಪ, ನಂ.46, ಮಾರುಕಟ್ಟೆ ರಸ್ತೆ, ಬಸವನಗುಡಿ, ಬೆಂಗಳೂರು–04. ರವರಿಗೆ ಧೃಢೀಕೃತ ಅಂಚೆ ಮೂಲಕ.
6) ಕಚೇರಿ ಪ್ರತಿ .

ವಿಶೇಷ ಜಿಲ್ಲಾಧಿಕಾರಿ (ಕಂ)
ಬೆಂಗಳೂರು ಜಿಲ್ಲೆ.ಬೆಂಗಳೂರು.